## ಪ್ರಾರ್ಥನಾ ಮನವಿ

1.ಕುಟುಂಬಗಳ ಮೇಲೆ ಬಹು ತೀವ್ರವಾದ ಕೇಡುಗಳು ಉಂಟಾಗದಂತೆ ನಮ್ಮ ಕುಟುಂಬಗಳಿಗಾಗಿಯೂ, ನಮ್ಮ ಕುಟುಂಬದ ಎಲ್ಲರಿಗಾಗಿಯೂ ದೇವರು ತಕ್ಕಂತ ರಕ್ಷಣೆಯನ್ನು ನೀಡಿ ಅವರನ್ನು ಕಾಯ್ದುಕೊಳ್ಳುವಂತೆ ಪ್ರಾರ್ಥಿಸಿರಿ.

2.ದುರಾತ್ಮಗಳ ಕಾರ್ಯಗಳು ಕಟ್ಟಲ್ಪಡುವಂತೆಯೂ, ದೇವರು ಅವುಗಳ ಕಾರ್ಯಗಳು ನಡೆಯದಂತೆ ತಡೆಮಾಡಿ ಓಡಿಸುವಂತೆಯೂ ಪ್ರಾರ್ಥಿಸಿರಿ.

3.ಕುಟುಂಬಗಳಲ್ಲಿ ಸಂಬಂಧಗಳು ಕೆಟ್ಟುಹೋಗುವದರಿಂದ ಸಂತತಿಗಳು ಭಾದೆಗೊಳಪಡುತ್ತದೆ. ಇದರ ನಿಮಿತ ದೇಶದಲ್ಲಿ ದುಷ್ಟಜನರು ಎದ್ದೇಳದಂತೆ ದೇವರು ಕಾಯಲಿಕ್ಕಾಗುವಂತೆ ಪ್ರಾರ್ಥಿಸಿರಿ.ದುಷ್ಟ ಸಂತತಿ ಎದ್ದೇಳುವದರಿಂದ ದೇಶದ ಭವಿಷ್ಯ ಕೆಟ್ಟುಹೋಗದಂತೆಯೂ ಗೋಳಾಡಿ ಪ್ರಾರ್ಥಿಸಿರಿ.

4.ಕುಟುಂಬಗಳು ಕೆಟ್ಟು ಚದರಿಹೋಗಲು ಈ ದುಷ್ಟ ಸೇವಕರುಗಳು ಕಾರ್ಯಮಾಡದಂತೆ ದೇವರು ಕುಟುಂಬಗಳನ್ನು ಕಾಯುವಂತೆಯೂ, ಕುಟುಂಬಗಳಲ್ಲಿ ಬೇರ್ಪಾಡನ್ನು ಏರ್ಪಡಿಸುವ ಯಾವ ದುಷ್ಟಸೇವಕರು ಎದ್ದೇಳದಂತೆ ದೇವರು ತಡೆಮಾಡುವಂತೆಯೂ ಪ್ರಾರ್ಥಿಸಿರಿ.

## ಪ್ರಾರ್ಥನೆ ಮಾಡಲು ಇಚ್ಛಿಸುತ್ತೀರಾ?

ಇಚಿತಹ ಪ್ರವಾದನೆಗಳಿಗೆ ಪ್ರಾರ್ಥಿಸಲು ಇಚ್ಛಿಸುತ್ತೀರಾ? ಹಾಗಾದರೆ ಈ ಕೆಳಕಂಡ ನಮ್ಮ ದೂರವಾಣಿ ಸಂಖ್ಯೆಗಳಿಗೆ ಯಾವುದಾದರೂ ಒಂದಕ್ಕೆ ಮಿಸ್ಡ್ ಕಾಲ್ ಕೊಡಿರಿ. ನಮ್ಮ ಸೇವಕರು ನಿಮ್ಮೊಂದಿಗೆ ಸಂಪರ್ಕಗೊಂಡು ನೀವು ಪ್ರಾರ್ಥಿಸುವದಕ್ಕಾಗಿ ಪ್ರವಾದನೆಗಳನ್ನು ನಮ್ಮಿಂದ ಹೊಂದಿಕೊಳ್ಳಲು ನಿಮಗೆ ಸಹಾಯ ಮಾಡುವರು.

0091/KAN/2019/0001

prophetic propagators mission

| MADURAI | CHENNAI | BANGALORE |
|---|---|---|
| 9488987770 | 9600001844 | 8095772333 |

propagators@vojmedia.com



### ದೇವರು ಪ್ರಕಟಿಸಿದ ಪ್ರವಾದನೆಗಳು

# ಕುಟುಂಬಗಳಿಗಾಗಿ..

**ಕುಟುಂಬಗಳ ಬಗ್ಗೆ ದೇವರು ನುಡಿದ ಮಾತು:**

ಈ ವರ್ಷದಲ್ಲಿ ದೇವರು ಮುಂಬರುವ ದಿನಗಳಲ್ಲಿ ಕುಟುಂಬಗಳ ನಡುವೆ ಉಂಟಾಗುವ ಕೆಲವು ಕೇಡುಕುಗಳ ಬಗ್ಗೆ ಮುನ್ಸೂಚನೆಯಾಗಿ ಎಚ್ಚರಿಸಿ ತಿಳಿಸಿದಂತ ಮಾತುಗಳನ್ನು ತಿಳಿದುಕೊಂಡು ಕುಟುಂಬದ ರಕ್ಷಣೆಗಾಗಿ ಪ್ರಾರ್ಥಿಸುವದಕ್ಕಾಗಿಯೇ ಈ ಕರಪತ್ರವು ಪ್ರಕಟಿಸಲ್ಪಟ್ಟಿದೆ. ದೇವರು ನುಡಿದ ಮಾತುಗಳನ್ನು ಸಂಕ್ಷಿಪ್ತವಾಗಿ ಓದಿ ತಿಳಿದುಕೊಂಡು ಅದಕ್ಕಾಗಿ ಪ್ರಾರ್ಥಿಸಿರಿ.

ಈ ಪ್ರವಾದನ ನುಡಿಯೂ 02.01.2019 ರಲ್ಲಿ ದೇವರು ಸಹೋ. ವಿನ್ಸೆಂಟ್ ಸೆಲ್ವಕುಮಾರ್ ಅವರಿಗೆ ಪ್ರಕಟಿಸಿ ತಿಳಿಸಿದಂತದ್ದು;

## ದೇವರು ಪ್ರಕಟಿಸಿದ ಪ್ರವಾದನೆಗಳು

ಇಗೋ ದೇಶದ ಕುಟುಂಬಗಳ ಮೇಲೆ ಕೇಡುಗಳು ಬಹು ತೀವ್ರವಾಗಿ ಹಿಮ್ಮೆಟ್ಟುತ್ತವೆ. ಕುಟುಂಬಗಳಿಗೆ ವಿರುದ್ಧವಾಗಿ ಕ್ರಿಯೇ ಮಾಡುತ್ತವೆ. ದೇಶವನ್ನು ಅನಾಚರಗೊಳಿಸಿ, ವ್ಯಭಿಚಾರ ಸಂತತಿಯನ್ನೂ, ನಿಮ್ಮ ಬೀದಿಯಲ್ಲಿ ಅಲೆದಾಡುವ ಕ್ರೂರ ಸಂತತಿಯನ್ನೂ ಎಬ್ಬಿಸಿ, ಶರೀರವನ್ನು ಬೇಟೆಯಾಡಿ ಅದರ ರಕ್ತವನ್ನು ಬೀದಿಯಲ್ಲಿ ಸುರಿಸುವಂತ ದುಷ್ಟರನ್ನೂ, ಹಣಕ್ಕಾಗಿ ಕೊಲೆಮಾಡುವ ಮನುಶತ್ವವಿಲ್ಲದ ಸಂತತಿಯನ್ನು ಬಹಳವಾಗಿ ಹೆಚ್ಚಳಪಡಿಸುವದಕ್ಕೂ, ಸೂಳೆಯ ಮಕ್ಕಳನ್ನೂ, ಕೇಡಕಿಗಾಗಿ ಮಾರಾಟ ಮಾಡುವ ಕ್ರೂರ ತಲೆಮಾರನ್ನು ಎಬ್ಬಿಸುವದಕ್ಕೂ, ದೇಶದ ನಡುವೆ ಕ್ರಿಯೇಮಾಡುವಂತ ದುಷ್ಟಾತ್ಮಗಳ ಕೃತ್ಯಗಳು ಬಿಚ್ಚಿ ಬಿಡಲ್ಪಡುತ್ತವೆ. ಅದು ದೇವರನ್ನು ಮರೆತ್ತಿರುವಂತ ಕುಟುಂಬಗಳ ಮೇಲೆಯೂ, ಕೇಡನ್ನು ನುಂಗುವ ಕುಟುಂಬಗಳ ಮೇಲೆಯೂ, ನನ್ನ ನಾಮವನ್ನು ಧರಿಸಿಕೊಂಡಿದ್ದೇವೆಂದು ಹೇಳಿಕೊಂಡು ನನ್ನನ್ನು ಬಿಟ್ಟು ಹಿಂಜರಿದಿರುವ ಕುಟುಂಬಗಳ ಮೇಲೆಯೂ, ಅನೀತಿಯನ್ನು ನಡೆಸಿ ಅದರ ಫಲದಿಂದ ತನ್ನನ್ನು ಹೆಚ್ಚಿಸಿಕೊಂಡ ಕುಟುಂಬಗಳ ಮೇಲೆಯೂ ಬಹುಕ್ರೂರವಾಗಿ ಕಾರ್ಯವೆಸಗುತ್ತದೆ.

ಇದರಿಂದ, ಹೆಚ್ಚಿನಾಂಶ ದಾಂಪತ್ಯ ಜೀವನಗಳು ಮುರಿದುಹೋಗುತ್ತವೆ. ಇದರ ಸಂಖ್ಯೆ ದೇಶದಲ್ಲಿ ಬಹು ಹೆಚ್ಚಾಗಿರುತ್ತದೆ. ಕುಟುಂಬಗಳೊಳಗೆ ನುಗ್ಗಿ ಅದರ ಸಂಬಂಧವನ್ನು ಕೆಡಿಸುವ ಆತ್ಮಗಳು ಬಹು ತೀವ್ರವಾಗಿ ಕಾರ್ಯವನ್ನೆ ಸುಗುವುದರಿಂದ ಅನೈತಿಕ ಸಂಬಂದವು, ಅಕ್ರಮಸಂಬಂದವುಳ್ಳ ದುಷ್ಟ ಜನರು ಕುಟುಂಬಗಳೊಳಗೆ ಎದ್ದೇಳುವರು. ಇದರಿಂದ ತನ್ನ ಗಂಡನನ್ನು ಕೊಲೆ ಮಾಡುವ ಹೆಂಡತಿಯೂ, ತನ್ನ ಹೆಂಡತಿಯನ್ನು ಕೊಲೆ ಮಾಡುವ ಗಂಡನೂ ಬಹಳವಾಗಿ ಹೆಚ್ಚಿಕೊಳ್ಳುವಂತದ್ದನ್ನು ನೀವು ಕಾಣುವಿರಿ. ಮಗಳನ್ನೆ ಕೆಡಿಸುವಂತ ಅಪ್ಪಂದಿರು, ಮಕ್ಕಳನ್ನೆ ಕೆಡಿಸುವಂತ ತಾತಂದಿರು ಹೆಚ್ಚಿಕೊಳ್ಳುವರು. ಜೂಜುಗಳಿಗೆ ಮಾರಲ್ಪಡುವ ಕುಟುಂಬಗಳೂ, ಶರೀರ ಭಾವದ ಇಚ್ಛೆಗಳ ಹುಚ್ಚುತನಕ್ಕೆ ಒಳಪಟ್ಟ ಕುಟುಂಬಗಳು ಬಹಳವಾಗಿ ಎದ್ದೇಳುವಂತದ್ದನ್ನು ನೋಡುವಿರಿ.

ಸಭೆಯೆಂಬುದು ತನ್ನ ಜವಾಬ್ದಾರಿಯನ್ನು ಮರೆತು ಕೇಡಿಗೂ, ಪಾಪದಕೃತ್ಯಗಳಿಗೂ, ಸುಳ್ಳು ಬೋಧನೆಗಳಿಗೂ, ಆಭರಣದ ಆಸೆಗಳಿಗೂ ತನ್ನನ್ನು ಮಾರಿಕೊಂಡದರ ನಿಮಿತ, ಇವುಗಳಿಗೆ ಒಳಪಟ್ಟಿರುವ ಇಂತಹ ಕುಟುಂಬಗಳ ಮೇಲೆ ಈ ಕೇಡು ಅಧಿಕಾರ ನಡೆಸುತ್ತದೆ. ಬುದ್ಧಿಹೀನವಾದ ಕುರುಬನನ್ನೂ, ಸುಳ್ಳು ಬೋಧನೆಯನ್ನೂ, ಹಿಂಬಾಲಿಸಿದ ಕುಟುಂಬಗಳ ಗೋಡೆಗಳು ಹೊಡೆದುಹೋಗಿ, ಅದರ ಬಾಗಿಲು ಮುರಿದುಹೋದದಾಗಿಯೂ ಇರುವದರಿಂದ, ಕೇಡು ಇವರನ್ನು ಬಹು ತೀವ್ರವಾಗಿ ಹಿಡಿದುಕೊಳ್ಳುತ್ತದೆ. ಇವರಿಗಾಗಿ ಗೋಳಾಡಿ ಮೊರೆಯಿಡುವವರೂ, ಇವರು ತಪ್ಪಿಸಿಕೊಳ್ಳುವಂತೆ ನನ್ನ ಮಾತಿನಿಂದ ಎಚ್ಚರಿಸಿ ಆಲೋಚನೆ ನೀಡುವವರೂ, ಇಲ್ಲದೇ ಇರುವದರಿಂದ, ದೇಶದ ಕುಟುಂಬಗಳ ಮೇಲೆ ಬರುವಂತ ಈ ಕೇಡು, ನನ್ನ ಜನರ ಮೇಲೆ ಬಹಳವಾಗಿ ಕ್ರಿಯೇ ಮಾಡುತ್ತದೆ. ಮಗನೂ, ತಂದೆಯೂ, ಮಗಳೂ, ತಾಯಿಯೂ ಒಟ್ಟಾರೆ ತಮ್ಮ ಶರೀರಭಾವವನ್ನು ಅನುಭವಿಸುವದಕ್ಕೆ ಆತುರಗೊಳ್ಳುವಂತದ್ದನ್ನೂ, ಸಹೋದರಿಯರೂ ಒಂದುಗೂಡಿ ಸಹೋದರರನ್ನೂ, ಸಹೋದರರೂ ಒಂದುಗೂಡಿಕೊಂಡು ಸಹೋದರಿಯರನ್ನೂ ಕೆಡಿಸುವಂತ ಸಂಗತಿಗಳನ್ನು ಕುಟುಂಬಗಳಲ್ಲಿ ನೋಡುವಿರಿ.

ಮತ್ತೂ, ದುಷ್ಟ ಜನರು, ಕ್ರೂರ ಜನರು ಕುಟುಂಬಗಳಲ್ಲಿ ಬಹಳವಾಗಿ ಎದ್ದೇಳುವರು. ತನ್ನ ಕುಟುಂಬ ರಕ್ಷಣೆಹೊಂದುವಂತೆ ತನ್ನನ್ನು ರಕ್ಷಿಸಿಕೊಳ್ಳುವಂತವನೂ, ತನ್ನ ಗೋಡೆ ಬಿದ್ದುಹೋಗದಂತೆ ನನ್ನಲ್ಲಿ ಸಹಾಯ ಕೇಳುವವನು ಧನ್ಯನು. ಅಂತವನನ್ನು ಕೇಡು ಮುಟ್ಟುವದಿಲ್ಲ. ನೀತಿಯಿಂದ ತನ್ನನ್ನು ನೆಲೆಗೊಳಿಸಿ, ಅನೀತಿಯ ಅಶುದ್ಧತ್ವದಿಂದ ತನ್ನನ್ನು ಕೆಡಿಸಿಕೊಳ್ಳದಂತೆ ಕಾಪಾಡಿಕೊಳ್ಳುವವನು ಧನ್ಯನು. ಅವನ ಬಿಡಾರವನ್ನು ಕೇಡು ಮುಟ್ಟುವದಿಲ್ಲ. ಸುಳ್ಳುಗಾರರನ್ನು ಹಿಂಬಾಲಿಸದಂತೆಯೂ, ನನ್ನ ನಾಮವನ್ನು ಅಪ್ರಯೋಜನವಾಗಿ ಉಪಯೋಗಿಸುವ ಕುರುಬನನ್ನು ಹಿಂಬಾಲಿಸದಂತೆಯೂ, ನನ್ನ ಆತ್ಮವನ್ನು ತಮ್ಮ ಇಚ್ಛಾನುಸಾರಗಳಿಗಾಗಿಯೂ, ನನ್ನ ವಾಕ್ಯವನ್ನು ತನ್ನ ಹೊಟ್ಟೆಪಾಡಿಗಾಗಿ ಉಪಯೋಗಿಸುವಂತ ದುಷ್ಟನನ್ನು ಹಿಂಬಾಲಿಸದಂತೆಯೂ ತನ್ನ ಜೀವವನ್ನು ಕಾಪಾಡಲು ಎಚ್ಚರವಹಿಸುವವನು ಧನ್ಯನು. ನಾನು ಅವನಿಗೆ ಸಹಾಯಕನಾಗಿಯೂ, ನನ್ನ ದೂತರು ಅವನಿಗೆ ಕಾವಾಲುಗಾರರಾಗಿಯೂ ಇರುವರು. ಆಗ ಅವನ ಮಕ್ಕಳು ರಕ್ಷಿಸಲ್ಪಟ್ಟು, ಅವನ ಅಸ್ತಿರವಾರಗಳು ಬಲಗೊಳ್ಳುತ್ತದೆ ಎಂದು ದೇವರಾದ ಕರ್ತನು ನುಡಿಯುತ್ತಾನೆ.